ಗೊಂದಲದ ಮನಸ್ಥಿತಿಯ ಹಂತ. ಇಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ಹೆಚ್ಚು ಎಡವುತ್ತಾರೆ ಎಂಬುದು ಗಮನಿಸಬೇಕಾದ ಅಂಶ. ಆದರೆ ಇವು ಇಲ್ಲಿ ಹೆಚ್ಚು ಸುದ್ದಿಯಾಗುವುದಿಲ್ಲ. ನಗರ ಪ್ರದೇಶಗಳಲ್ಲಿ ಪೋಷಕರ 'ಕೇರಿಂಗ್'ನಿಂದಲೋ, ಮಾಧ್ಯಮಗಳ ಮಾಹಿತಿಯಿಂದಲೋ, ಪೋಷಕರ ಮತ್ತು ಶಾಲೆಯ ಅತಿ ಶಿಸ್ತಿನಿಂದಲೋ ಒಟ್ಟಾರೆ ಇಲ್ಲಿ ಪ್ರೌಢಶಾಲಾ ಹಂತದ ಮಕ್ಕಳು ಪ್ರೀತಿ– ಪ್ರೇಮಗಳಂತಹ ವಿಚಾರಗಳಿಗೆ ಬಲಿಯಾಗುವುದು ಸ್ವಲ್ಪ ಮಟ್ಟಿಗೆ ಕಡಿಮೆ. (ಆದರೆ ಅದು ನಗರಗಳಲ್ಲಿ ಬೇಗ ಸುದ್ದಿಯಾಗುತ್ತದೆ.) ಅತಿಯಾದ ಓದಿನ ಒತ್ತಡವೂ ಇರಬಹುದು. ಜೊತೆಗೆ ನಗರ ಪ್ರದೇಶಗಳಲ್ಲಿ ಮಕ್ಕಳನ್ನು ಪ್ರತೀ ಹಂತದಲ್ಲೂ ಗಮನಿಸಿಕೊಳ್ಳುವ ಪೋಷಕ ವರ್ಗವಿದೆ. ಹಾಗಾಗಿ ದಾರಿ ತಪ್ಪಿದರೂ ಸರಿ ದಾರಿಗೆ ಬರುವ ಅವಕಾಶಗಳಿವೆ. ಇವುಗಳನ್ನೂ ಮೀರಿ ನಡೆವ ಅಚಾತುರ್ಯಗಳು ಕೈ ಮೀರಿದ್ದು.

ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಪೋಷಕರ ಅನಕ್ಷರತೆ, ಅವರ ಅಮಾಯಕತೆ ಮತ್ತು ಮುಗ್ಧತೆಯೇ ಮಕ್ಕಳಿಗೆ ಬಂಡವಾಳವಾಗಿಬಿಡುತ್ತದೆ. ಇಲ್ಲಿ ಆಟೋ, ಬಸ್ಸು, ಟೆಂಪೋ ಮತ್ತು ಸೈಕಲ್‌ಗಳಲ್ಲಿ ಸಮೀಪದ ಶಾಲೆಗಳಿಗೆ ಹೆಣ್ಣುಮಕ್ಕಳು ಹೊರಡುತ್ತಾರೆ. ಹೀಗೆ ಬರುವ ಒಂದಷ್ಟು ಮಕ್ಕಳು ಬಹುಬೇಗ ಅಪ್ರಬುದ್ಧ ಪ್ರೀತಿಯ ಸುಳಿಗೆ ಸಿಲುಕುತ್ತಾರೆ. ಅವರು ಆಯ್ಕೆ ಮಾಡಿಕೊಳ್ಳುವ ಹುಡುಗರೋ ನಿರುದ್ಯೋಗಿ, ಅಪ್ರಾಪ್ತ ವಯಸ್ಸಿನ ಯುವಕರು. ಅಂದರೆ ಜೀವನದಲ್ಲಿ ಗುರಿ ಇಲ್ಲದ, ಉದ್ಯೋಗವಿಲ್ಲದ, ಜವಾಬ್ದಾರಿಯಿಲ್ಲದ ಪೀಳಿಗೆಯತ್ತ ಇವರು ಆಕರ್ಷಿತರಾಗುವುದು ದುರಂತ.

ಮನೆಯಲ್ಲಿ ಇಂತಹ ವಿಚಾರ ತಿಳಿದರೆ ಬುದ್ಧಿ ಹೇಳಿ ಅಥವಾ ಹಿಂದೆ ಬಿದ್ದಿರುವ ಹುಡುಗರಿಗೆ ಗದರಿಸಿ ಸರಿಪಡಿಸುವ ಬದಲು ಹೆಣ್ಣುಮಕ್ಕಳನ್ನೇ ಶಾಲೆಯಿಂದ ಬಿಡಿಸುವುದು ಪೋಷಕರ ಅಂತಿಮ ತೀರ್ಮಾನವಾಗುತ್ತದೆ. ಈ ಬಲೆಗೆ ಬಿದ್ದ ಹೆಣ್ಣುಮಕ್ಕಳು ತಮ್ಮದೇ ಲೋಕದಲ್ಲಿ ಕಳೆದುಹೋಗುತ್ತಾರೆ. ಇಲ್ಲಿ ಪತ್ರ ವಿನಿಮಯ, ಅನವಶ್ಯಕ ದೂರವಾಣಿ ಕರೆಗಳು, ಹುಟ್ಟುಹಬ್ಬ, ಪ್ರೇಮಿಗಳ ದಿನಾಚರಣೆಗಳಲ್ಲಿ ಉಡುಗೊರೆಗಳ ವಿನಿಮಯ ಎಲ್ಲವೂ ಪೋಷಕರ– ಶಿಕ್ಷಕರ ಗಮನಕ್ಕೆ ಬರದಂತೆ ನಡೆಯುತ್ತಿರುತ್ತವೆ. ಇದಕ್ಕೆ ಒಂದಷ್ಟು ಸ್ನೇಹಿತರ ಸಹಕಾರ. ಅಸಹಕಾರ ಇರುವ ಸ್ನೇಹಿತರು ಮೊದಲು ವಿಷಯ ಮುಟ್ಟಿಸುವುದು ಶಿಕ್ಷಕರಿಗೆ. ಶಿಕ್ಷಕರ ವಿಚಾರಣೆಗಳಲ್ಲಿ ಕೆಲವೊಮ್ಮೆ ಈ ಸಮಸ್ಯೆಗಳು ನಿವಾರಣೆಯಾಗುವ ಭರವಸೆ ಕಾಣುತ್ತವೆ. ಆದರೆ ಅವರ ಮುಂದೆ ಮುಗ್ಧರಂತೆ ಕಥೆ ಕಟ್ಟಿ ತಮ್ಮದೇ ಹಾದಿಯಲ್ಲಿ ನಡೆಯುವ ಮಕ್ಕಳೂ ಇಲ್ಲದಿಲ್ಲ. (ಈ ಕಠಿಣ ವಯಸ್ಸು– ಮನಸ್ಸು ಎರಡನ್ನೂ ದಾಟಿ ಮುಂದೆ ಹೋದ ಮಕ್ಕಳಲ್ಲಿ ಆಕರ್ಷಣೆ ಕಡಿಮೆಯಾಗಿ ಗಂಡು– ಹೆಣ್ಣು ಮಕ್ಕಳಿಬ್ಬರೂ ಸಹಜ ಸ್ನೇಹಿತರಂತೆ ವರ್ತಿಸುವುದನ್ನೂ ಕ್ರಮೇಣ ಕಲಿಯುವುದಿದೆ.)

ಇಂತಹ ಪ್ರೇಮ ಪ್ರಕರಣಗಳು ಎಲ್ಲೂ, ಎಂದೂ ಯಶಸ್ವಿಯಾಗದು ಎಂಬುದು ಎಲ್ಲರಿಗೂ ಮನದಟ್ಟಾಗಿರುವ ಸತ್ಯ. ಇನ್ನೂ ಅಪ್ರಬುದ್ಧ ಮನಸ್ಥಿತಿಯಲ್ಲಿರುವ ಈ ಬಾಲೆಯರು ನಿರುದ್ಯೋಗಿ ಯುವಕರೊಂದಿಗೆ ಪಲಾಯನ ಮಾಡಿದ ಘಟನೆ ಒಂದು ಊರಿನಲ್ಲಿ ನಡೆಯಿತೆಂದರೆ ಮುಗಿಯಿತು. ಅಲ್ಲಿ ಒಂದಷ್ಟು ಸರಣಿ ಬಾಲ್ಯ ವಿವಾಹಗಳು, ಶಾಲೆ ಬಿಡಿಸುವುದು ಎಲ್ಲವೂ ನಡೆದು ಹೋಗುತ್ತವೆ. ಅಚ್ಚರಿಯೆಂದರೆ ಈ ಹಂತ ದಾಟಿದ ಅಂದರೆ ಪ್ರೌಢಶಾಲಾ ಹಂತ ದಾಟಿದ ಹೆಚ್ಚಿನ ಮಕ್ಕಳು ತಮ್ಮಷ್ಟಕ್ಕೆ ತಾವೇ ಸರಿ ತಪ್ಪುಗಳನ್ನು ಗುರುತಿಸಿಕೊಳ್ಳುವಂತಾಗುತ್ತಾರೆ. ಓದಿನಲ್ಲಿ ಆಸಕ್ತಿ ಬೆಳೆಸಿಕೊಳ್ಳುತ್ತಾರೆ. ಜೀವನದಲ್ಲಿ ಗುರಿ ನಿರ್ಧರಿಸಿಕೊಳ್ಳುತ್ತಾರೆ. ಪಿಯುಸಿ ಹಂತದಲ್ಲಿಯೂ ಆಕರ್ಷಣೆಗೆ ಒಳಪಡುವ, ಅಪ್ರಬುದ್ಧ ಪ್ರೀತಿಗೆ ಸಿಲುಕುವ ಒಂದಷ್ಟು ಮಕ್ಕಳು ಕಾಣಸಿಗುತ್ತಾರಾದರೂ ಮೋಸ ಹೋಗುವ ಪ್ರಮಾಣ ಕಡಿಮೆ ಎಂದುಕೊಳ್ಳಬಹುದು. ಒಟ್ಟಾರೆ 14 ರಿಂದ 17ನೇ ವಯಸ್ಸಿನವರೆಗಿನ ಮಕ್ಕಳು ಆಕರ್ಷಣೆ, ಪ್ರೀತಿ, ಪ್ರೇಮ, ಅಲಂಕಾರ ಇತ್ಯಾದಿಗಳ ಮೋಹಕ್ಕೆ ಬೇಗನೆ ಸಿಲುಕುತ್ತಾರೆ. ಅವರನ್ನು ಸರಿದಾರಿಗೆ ತರಲು ಪ್ರಯತ್ನಿಸುವ ಪೋಷಕರು, ಶಿಕ್ಷಕರು, ಸ್ನೇಹಿತರು ಅವರ ಪಾಲಿಗೆ ಶತ್ರುಗಳೇ ಸರಿ. ನನ್ನ ಸೇವಾವಧಿಯಲ್ಲಿ, ನನ್ನ ಸಮೀಪದ ಇತರ ಶಾಲೆಯ ಶಿಕ್ಷಕ ವರ್ಗದ ಅನುಭವದಲ್ಲಿ 9–10ನೇ ತರಗತಿಯಲ್ಲಿ ಪ್ರೀತಿ–ಪ್ರೇಮದ ಅನರ್ಥಗಳಿಂದ ಶಾಲೆ ಬಿಟ್ಟ ವಿದ್ಯಾರ್ಥಿಗಳು ಪ್ರತೀ ವರ್ಷ ಕಾಣಸಿಗುತ್ತಾರೆ. ತಮ್ಮ ಮಕ್ಕಳ ಇಂತಹ ನಡತೆಗಳ ಸಣ್ಣ ಸುಳಿವು ಕಂಡ ಕೂಡಲೇ ಶಾಲೆ ಬಿಡಿಸಿ ಮನೆಯಲ್ಲಿರಿಸುವ ಅಥವಾ ವಿವಾಹ ಮಾಡುವ ಪೋಷಕರನ್ನು ಕಂಡಿದ್ದೇವೆ. ಬುದ್ಧಿವಂತ ಮಕ್ಕಳು ಶಾಲೆ ಬಿಟ್ಟಾಗ ಶಿಕ್ಷಕರದು ನಿಸ್ಸಹಾಯಕ ಪರಿಸ್ಥಿತಿ.

ಹೀಗೆ ಶಾಲೆ ಬಿಟ್ಟಿದ್ದ 10ನೇ ತರಗತಿಯ ವಿದ್ಯಾರ್ಥಿನಿಯ ಪೋಷಕರೊಬ್ಬರನ್ನು ಮನವೊಲಿಸುವ ಪ್ರಯತ್ನದಲ್ಲಿದ್ದಾಗ ಆ ತಂದೆ 'ಹಿಂದಿನ ಕಾಲದಲ್ಲಿ ಕಾಣದೆ ಹೆಣ್ಣು ಮಕ್ಕಳನ್ನು ಹೊರಗೆ ಬಿಡುತ್ತಿರಲಿಲ್ಲ ಮೇಡಂ. ನಾವಂತೂ ಓದಲಿಲ್ಲ. ಇವಳು ಓದಲಿ ಅಂತ ಕಳಿಸಿದರೆ, ಯಾರನ್ನೋ ಫ್ರೆಂಡ್ ಮಾಡಿಕೊಂಡಿದ್ದಾಳೆ ಅಂತ ತಿಳೀತು. ನಮಗೆ ಅವಳ ವಿದ್ಯೆಗಿಂತ ಮನೆಯ ಮರ್ಯಾದೆ ಮುಖ್ಯ. ಶಾಲೆಗೆ ಕಳಿಸೋಲ್ಲ' ಎಂದು ಖಡಾ ಖಂಡಿತವಾಗಿ ನೋವಿನಲ್ಲೇ ಹೇಳಿದರು. ಇನ್ನೊಂದೆಡೆ ಮಗಳ ಕಣ್ಣಲ್ಲಿ 'ತಪ್ಪು ಮಾಡಿದೆ, ಒಂದು ಅವಕಾಶ ಕೊಡಿಸಿ' ಎನ್ನುವ ಮಾತು ಕಾಣಿಸುತ್ತಿತ್ತು. ಆದರೆ ನಾವೂ ಅಸಹಾಯಕರು. ಅವಕಾಶ ಕೊಡಿಸಿ ಅದು ಇನ್ನಾವುದೋ ಅನರ್ಥಕ್ಕೆ ದಾರಿಯಾದರೆ ಎಂಬ ಚಿಂತೆ ನಮ್ಮದು. ಹೀಗೆ ಹಲವು ಬಾರಿ ಇಂತಹ ಪ್ರಕರಣಗಳನ್ನು ಶಿಕ್ಷಕರು ಬೇರೆ ಬೇರೆ ರೀತಿಗಳಲ್ಲಿ ಕಂಡಿರುತ್ತಾರೆ.

ಅಪ್ರಬುದ್ಧ ಆಕರ್ಷಣೆಗೆ ಸಿಲುಕಿದ ಮಕ್ಕಳಿಗೆ ಓದಿನತ್ತ ಆಸಕ್ತಿ ಕಡಿಮೆಯಾಗುತ್ತದೆ. ಮದುವೆಯೇ ಎಲ್ಲದಕ್ಕೂ ಅಂತಿಮ. ಒಡವೆ, ಬಟ್ಟೆ, ಸುತ್ತಾಟ ಇಷ್ಟೇ ಜೀವನ. ಹಾಗಾಗಿ ಓದು ಬಿಟ್ಟು ಮದುವೆಯಾಗಿ ತಾಪತ್ರಯವಿಲ್ಲದೆ ಬದುಕಬಹುದು ಎನ್ನುವ ಭಾವ ಗ್ರಾಮೀಣ ಪ್ರದೇಶದ ಶಾಲೆಗಳ ಶೇ. 10–15 ರಷ್ಟು ಮಕ್ಕಳಿಗಿದೆ. ಇಲ್ಲಿ ಅವರಿಗೆ ವಿದ್ಯಾಭ್ಯಾಸ ಶ್ರಮ ಮತ್ತು ಕ್ಲಿಷ್ಟ ಎನಿಸತೊಡಗುತ್ತದೆ. ಮನೆಯಿಂದ ಶಾಲೆಗೆಂದು ಹೊರಟು ಶಾಲೆಗೆ ಚಕ್ಕರ್ ಹಾಕುವುದು, ಶಾಲೆಯಲ್ಲಿ ಹುಷಾರಿಲ್ಲದ ನೆಪವೊಡ್ಡಿ ಸ್ನೇಹಿತನೊಂದಿಗೆ ಸಮಯ ಕಳೆಯುವುದು– ಇವೆಲ್ಲಾ ಮಾಮೂಲಾಗಿ ಬಿಡುತ್ತದೆ. ಪಟ್ಟಣಗಳಲ್ಲಿ ಶಾಲಾ– ಕಾಲೇಜಿಗೆ ಗೈರುಹಾಜರಾದಲ್ಲಿ ಅದರ ಮಾಹಿತಿ ಮೊಬೈಲ್ ಮೂಲಕ ಪೋಷಕರಿಗೆ ಬಹು ಬೇಗನೆ ತಲುಪುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಹಾಗಾಗುವುದಿಲ್ಲ. ಒಟ್ಟಾರೆ ಈ ಅಪ್ರಬುದ್ಧ ಪ್ರೇಮ ಪ್ರಕರಣಗಳಿಂದ ಅಮಾಯಕ ಹೆಣ್ಣು ಮಕ್ಕಳು ಮೋಸ ಹೋಗಿ, ಜೀವನ, ಭವಿಷ್ಯ, ಮನಸ್ಸುಗಳನ್ನು ಹಾಳು ಮಾಡಿಕೊಳ್ಳುವುದನ್ನು ತಪ್ಪಿಸಬೇಕಾದದ್ದು ಅಥವಾ ತಪ್ಪಿಸುವ ಕನಿಷ್ಠ ಪ್ರಯತ್ನವನ್ನಾದರೂ ಮಾಡಬೇಕಾದದ್ದು ಸಮಾಜ ಕರ್ತವ್ಯ.

ಪೋಷಕರು, ಶಿಕ್ಷಕರು, ಮಾಧ್ಯಮಗಳು, ಸಮಾಜ ಎಲ್ಲರೂ ಈ ನಿಟ್ಟಿನಲ್ಲಿ ಒಂದು ಪ್ರಯತ್ನವಂತೂ ಮಾಡಲೇಬೇಕು. ಶಿಕ್ಷಣ ಕ್ಷೇತ್ರದಲ್ಲಿ ಹದಿಹರೆಯ ಶಿಕ್ಷಣದ ಮಾಹಿತಿ ಇಂದು ಕಡ್ಡಾಯವಿದೆ. ಆರೋಗ್ಯ ಇಲಾಖೆಯೂ ಇದಕ್ಕೆ ಕೈ ಜೋಡಿಸುತ್ತದೆ. ದೇಹದ ಬೆಳವಣಿಗೆಯ ಮಾಹಿತಿ ಹಾಗೂ ಮಾನಸಿಕ ಸ್ಥಿತಿಯ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಶಿಕ್ಷಕರೂ ಮಕ್ಕಳಿಗೆ ಅರಿವು ಮೂಡಿಸುವ, ಎಚ್ಚರಿಸುವ ಎಲ್ಲಾ ಪ್ರಯತ್ನವನ್ನೂ ಮಾಡುತ್ತಿರುತ್ತಾರೆ. ಆದರೆ ಇದಕ್ಕೆಲ್ಲಾ ಪೋಷಕರ ಸಹಕಾರ ಮುಖ್ಯವಾಗುತ್ತದೆ. ಪೋಷಕರೇ ಹೆಚ್ಚಿನ ಜವಾಬ್ದಾರಿ ಹೊರಬೇಕಾಗುತ್ತದೆ. ಶಿಕ್ಷಕರು ಅಥವಾ ಸ್ನೇಹಿತರಿಂದ ಮಾಹಿತಿ ಪಡೆದ ಪೋಷಕರು ಕೆಲವೊಮ್ಮೆ ಸಣ್ಣ ವಿಷಯವನ್ನು ದೊಡ್ಡದಾಗಿಯೂ, ಅಗಾಧ ಎನಿಸುವ ಸಮಸ್ಯೆಯನ್ನು ಚಿಕ್ಕದೆಂದೂ ನಿರ್ಲಕ್ಷ್ಯ ಮಾಡುವ ಸಾಧ್ಯತೆಗಳಿರುತ್ತವೆ. ಹಾಗಾಗಿ ಎಲ್ಲವೂ ಪೋಷಕರ ಮೇಲೆ ಅವಲಂಬಿತವಾಗಿರುತ್ತದೆ.

ಈ ಹಂತದಲ್ಲಿ ಹದಿಹರೆಯದ ಶಿಕ್ಷಣದೊಂದಿಗೆ ಇಂದಿನ ಸಮಾಜದಲ್ಲಿ ಶಿಕ್ಷಣದ ಮಹತ್ವ, ಆರ್ಥಿಕ ಸ್ವಾವಲಂಬನೆ, ಲೈಂಗಿಕ ಹಿಂಸೆಗಳು, ಕುಟುಂಬದ ಮಹತ್ವ, ಹೆಚ್ಚುತ್ತಿರುವ ಅಪಹರಣ, ಬ್ಲ್ಯಾಕ್‌ಮೇಲ್ ತಂತ್ರಗಳು, ಅವುಗಳು ತಂದೊಡ್ಡುವ ಸಮಸ್ಯೆಗಳು, ಸಮಾಜದಲ್ಲಿ ನಮ್ಮ ಸ್ಥಾನಮಾನ, ವಿವಾಹದ ನಂತರದ ಜವಾಬ್ದಾರಿಗಳು ಹೀಗೆ ಎಲ್ಲಾ ಸೂಕ್ಷ್ಮ ವಿಷಯವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುವ ಕೌನ್ಸೆಲಿಂಗ್ ತರಗತಿಗಳೂ ನಡೆಯಬೇಕಿದೆ. ನಗರ, ಹಳ್ಳಿ ಎಲ್ಲೇ ಆದರೂ ವಿದ್ಯಾವಂತ, ಅವಿದ್ಯಾವಂತ ಯಾರೇ ಆದರೂ, ಗಂಡು ಮಕ್ಕಳಿಗೆ ಹೆಣ್ಣು ಮಕ್ಕಳೊಂದಿಗಿನ ನಡವಳಿಕೆಯ ಬಗ್ಗೆ ಅರಿವು ಮೂಡಿಸಬೇಕಾಗಿದೆ.

ಗಂಡು ಮಕ್ಕಳಿಗೂ ಈ ಅಪ್ರಬುದ್ಧ ಪ್ರೀತಿಯ ಬಗ್ಗೆ ಮನವರಿಕೆ ಮಾಡಿ ಕೊಡಬೇಕಾಗಿದೆ. ಜವಾಬ್ದಾರಿ ಅನ್ನುವುದು ಒಮ್ಮಿಂದೊಮ್ಮೆಲೆ ಬರುವುದಲ್ಲ. ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ವ್ಯಕ್ತಿತ್ವಕ್ಕೆ ಭದ್ರ ಬುನಾದಿಯನ್ನು ನಿರ್ಮಿಸಬೇಕೆಂದಿದ್ದರೆ ಅಪ್ರಬುದ್ಧ ಪ್ರೇಮದ ಬಗ್ಗೆ ಗಂಡುಮಕ್ಕಳಿಗೂ ಎಚ್ಚರ ಮೂಡಿಸಬೇಕಿದೆ. ಹೀಗಾದಾಗ ಮಾತ್ರ ವಿದ್ಯಾವಂತ, ಸಂಸ್ಕಾರಯುತ ಸಮಾಜ ಸೃಷ್ಟಿಯಾಗಲು ಸಾಧ್ಯ. ಆದರೆ ಇದರ ಪ್ರಾರಂಭ ಯಾರಿಂದ? ಎಲ್ಲಿಂದ? ಹೇಗೆ ಎಂಬುದೇ ಯಕ್ಷ ಪ್ರಶ್ನೆ.